ಎಂಬ ತನ್ನ ಕವಿತೆಯಲ್ಲಿ "Man is dying before his natural death" (ಮಾನವನು ತನ್ನ ಸಹಜ ಸಾವಿಗೆ ಮುಂಚೆಯೇ ಸಾಯುತ್ತಿದ್ದಾನೆ) ಎಂದು ಮನೋಜ್ಞವಾಗಿ ಹೇಳಿದ್ದಾನೆ. ಇದಕ್ಕೆಲ್ಲ ಮನುಷ್ಯ ಮಾಡಿದಂತಹ ಪರಿಸರ ಮಾಲಿನ್ಯವೇ ಎಂದು ವಿಶದೀಕರಿಸಿದ್ದಾನೆ. ಕೇವಲ ಮಾನವ ಮಾತ್ರವಲ್ಲ, ಇವತ್ತು ಇಡೀ ಜೀವಸಂಕುಲಕ್ಕೆ ಅಪಾಯ ಬಂದೊದಗಿದೆ. ಹಿಂದೆ ಪ್ರತಿದಿನ ಎದ್ದಕೂಡಲೇ, ಬೀಸುವ ಮಂದ ಗಾಳಿಯಲ್ಲಿ ತೇಲಿಬರುವ ಪುಟ್ಟ ಪುಟ್ಟ ಗುಬ್ಬಿಗಳ ಕಲರವ ಬಾಲಕನಾಗಿದ್ದ ನನ್ನ ಕಿವಿಗಳಿಗೆ ಅದೆಷ್ಟೊಂದು ಮುದ ನೀಡು ತ್ತಿತ್ತು! ಆದರೆ ಆ ಅದೃಷ್ಟ ನನಗೆ ಈಗಿಲ್ಲ. ಏಕೆಂದರೆ ಮಾನವನ ಕಾಟವನ್ನು ತಾಳಲಾರದೇ ಮುದ್ದಾದ ಆ ಹಕ್ಕಿಗಳು ಅಜ್ಞಾತ ಲೋಕಕ್ಕೆ ಪಯಣಿಸಿವೆ. ಹಾಗಾದರೆ ಈ ಪಾಪಿ ಮಾನವ ಮಾಡಿರುವುದಾದರೂ ಏನು?

ಯಾರೋ ಒಬ್ಬ ಪೂರ್ವಜರು ಹಿಂದೊಮ್ಮೆ ಹೇಳಿದ್ದರಂತೆ, ಮುಂದೊಂದು ದಿನ ಮಾನವ ತಾನೇ ಮಾತಾಡುತ್ತಾನೆ, ತಾನೇ ನಗುತ್ತಿರುತ್ತಾನೆ ಎಂದು. ಆ ಮಾತಿನ ಗೂಢಾರ್ಥವೇ ಇಂದು ನಾವು ಉಪಯೋಗಿಸುತ್ತಿರುವ, ಹಕ್ಕಿಗಳ ಪಾಲಿಗೆ ಯಮಸ್ವರೂಪಿ ಸಾಧನವಾದ ಮೊಬೈಲ್ ಫೋನ್. ಮೊಬೈಲ್‌ನಿಂದ ಹೊರ ಹೊಮ್ಮುತ್ತಿರುವ ಶಬ್ದಾತೀತ ತರಂಗಗಳು ಮುಗ್ಧ ಹಕ್ಕಿಗಳ ಪ್ರಾಣವನ್ನು ತೆಗೆಯುತ್ತಿವೆ. ಮಾರಿಷಸ್ ದ್ವೀಪದಲ್ಲಿ ರಾರಾಜಿ ಸುತ್ತಿದ್ದ ಡೋಡೋ ಎಂಬ ಆಕರ್ಷಕ ಹಕ್ಕಿ ಇಂದು ಮಾನವನ ಲೋಭಕ್ಕೆ ಗುರಿಯಾಗಿ ಕಣ್ಮರೆಯಾಗಿ ಹೋಗಿದೆ. ನೀಲಗಿರಿ ಎಲೆ ಕೋತಿ, ನೀಲಗಿರಿ ತಾರ್, ಸಿಂಹಬಾಲದ ಸಿಂಗಳೀಕ ಮುಂತಾದ ಪ್ರಾಣಿಜಾತಿಗಳು ಇದು ಅಪಾಯದ ಅಂಚಿನಲ್ಲಿವೆ.

ಹೀಗೆ ನಮ್ಮ ಜೀವ ವೈವಿಧ್ಯತೆಯನ್ನು ನಾಶಮಾಡುವಲ್ಲಿಯೂ ಮಾನವನು ಹಿಂದೇಟು ಹಾಕಿಲ್ಲ. ಆದ್ದರಿಂದಲೇ ಐ.ಪಿ.ಸಿ.ಸಿ.ಯ (Inter- Governmental Panel on Climate Change) ಚೇರ್ಮನ್ ರಾದ ಡಾ. ಆರ್.ಕೆ. ಪಚೌರಿಯವರು, "ಭೂಮಂಡಲದ ಸಕಲ ತಳಿಗಳನ್ನೂ ಮನುಕುಲವು ವಿನಾಶಗೊಳಿಸುತ್ತಿರುವುದು ಸುಸ್ಪಷ್ಟ ವಾಗಿರುವುದರಿಂದ, ಸ್ವತಃ ಮಾನವರೇ ಮಾನವ ಜನಾಂಗದ ಭವಿಷ್ಯವನ್ನು ವಿನಾಶಗೊಳಿಸುತ್ತಿದ್ದಾರೆಂದು ಹೇಳಲೇಬೇಕಾಗಿದೆ" ಎಂದು ನುಡಿದಿದ್ದಾರೆ. ಎಂಥ ವಿಪರ್ಯಾಸ!

ತಾಯಿ ಕರುಣಾಮಯಿ; ಮಕ್ಕಳು ತನಗೆ ಎಷ್ಟೇ ತೊಂದರೆ ಕೊಟ್ಟರೂ, ತಾನು ಮಾತ್ರ ತನ್ನ ಮಕ್ಕಳಿಗೆ ಯಾವ ಕೇಡೂ ಮಾಡಲಾರಳು. ಆದರೆ ವಿಪರ್ಯಾಸವೆಂದರೆ, ಪ್ರಕೃತಿತಾಯಿಯ ಕುಡಿಯಾದ ಮಾನವ ತನ್ನ ತಾಯಿಯನ್ನೇ ಕೊಲೆ ಮಾಡಲು ಹೊರಟಿದ್ದಾನೆ. ಈಗಲಾದರೂ ಅವನು ಎಚ್ಚೆತ್ತುಕೊಳ್ಳಲೇಬೇಕು. ಇಲ್ಲದಿದ್ದರೆ ಅದರ ಭೀಕರ ಪರಿಣಾಮವನ್ನು ತಾನೇ ಅನುಭವಿಸ ಬೇಕಾಗುತ್ತದೆ. ಈ ಮಾನವನಿಗೆ ತಾಯಿಯ ಮಹತ್ವ ಗೊತ್ತಿಲ್ಲ ಎಂದೆನಿಸುತ್ತದೆ. ಜನಪದರು ಅದಕ್ಕಾಗಿಯೇ, "ದುಡ್ಡು ಕೊಟ್ಟರೆ ಬೇಕಾದ್ದ ಸಿಗತೈತಿ ಈ ಜಗದಲಿ ಕಾಣೋ, ಹಡೆದ ತಾಯಿಯನು ಕಳಕೊಂಡ ಮ್ಯಾಲ ಮತ್ತೆ ಸಿಗುವಳೇನೋ" ಎಂದು ಹೇಳಿರು ವುದು. ಆತ ಈಗಲಾದರೂ ಬದಲಾಗಬೇಕಾಗಿದೆ, ವೃಕ್ಷಗಳ ಮಾರಣಹೋಮ ಮಾಡುತ್ತಿರುವ ಆತ ಭಾರತೀಯ ಸಂಸ್ಕೃತಿಗೆ ಹಿಂದಿರುಗಬೇಕಾಗಿದೆ. ಒಂದು ಸುಭಾಷಿತ ಹೀಗೆ ಹೇಳುತ್ತದೆ:

**ಹತ್ತು ಬಾವಿಗಳು ಒಂದು ಕೆರೆಗೆ ಸಮ**
**ಹತ್ತು ಕೆರೆಗಳು ಒಂದು ಸರೋವರಕ್ಕೆ ಸಮ**
**ಹತ್ತು ಸರೋವರಗಳು ಒಬ್ಬ ಮಗನಿಗೆ ಸಮ**
**ಹತ್ತು ಮಕ್ಕಳು ಒಂದು ಮರಕ್ಕೆ ಸಮ**

ಅಭಿವೃದ್ಧಿಗೆ ಜೋತುಬಿದ್ದು ಏನನ್ನೂ ಲೆಕ್ಕಿಸದಿರುವ ಮಾನವ ಗೌತಮಬುದ್ಧನ ಈ ಮಾತನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಅವನು ಹೇಳುತ್ತಾನೆ: "ಅರಣ್ಯವೆಂದರೆ ವಿಶಿಷ್ಟ ಜೀವಕೋಶ. ಅದು ತನಗಾಗಿ ಏನನ್ನೂ ಬೇಡದೆ, ಬೇಡಿ ಬಂದ ಎಲ್ಲರಿಗೂ ತನ್ನ ಅಸ್ತಿತ್ವವನ್ನು ಧಾರೆ ಎರೆಯುತ್ತದೆ; ಎಲ್ಲಾ ಜೀವಿಗಳಿಗೂ ಆಶ್ರಯ ನೀಡುತ್ತದೆ; ತನ್ನನ್ನು ಕಡಿಯಲು ಕೊಡಲಿ ಎತ್ತಿದವನಿಗೂ ನೆರಳು ನೀಡುತ್ತದೆ."

ಜಗತ್ತಿನ ಮುಂದುವರಿದ ದೇಶಗಳು ಪರಿಸರ ಮಾಲಿನ್ಯ ಮಾಡುವಲ್ಲಿ ಮುಂಚೂಣಿಯಲ್ಲಿವೆ ಎಂಬುದು ಚಿಂತನಾರ್ಹ. 'ಜಗತ್ತಿನ ಹಿರಿಯಣ್ಣ' ಎಂದು ಕರೆಯಿಸಿಕೊಳ್ಳುವ ಅಮೆರಿಕ ದೇಶ ಪರಿಸರಮಾಲಿನ್ಯ ಮಾಡುವಲ್ಲಿಯೂ ತನ್ನ ಹಿರಿತನವನ್ನು ಬಿಟ್ಟಿಲ್ಲ. "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ" ಎನ್ನುವಂತೆ ಇತರ ದೇಶಗಳೂ ಇದೇ ಮಾರ್ಗವನ್ನು ಹಿಡಿಯುತ್ತಿವೆ. ಇಂತಹ ಕೆಟ್ಟ ಅಭ್ಯಾಸವನ್ನು ಇತರ ದೇಶಗಳು ಇಂದು ಬಿಡಬೇಕಾಗಿದೆ. ಆದ್ದ ರಿಂದಲೇ ಕಾರ್ಲ್‌ಮಾರ್ಕ್ಸ್ ಹೀಗೆ ಹೇಳುತ್ತಾರೆ:

"ಮಾನವ ಪ್ರಕೃತಿಯಿಂದ ಜೀವಿಸುತ್ತಾನೆ. ಪ್ರಕೃತಿಯು ಅವನ ದೇಹದಲ್ಲಿಯೇ ಅಂತರ್ಗತವಾಗಿದೆ. ಆದ್ದರಿಂದ ಅವನು ಭೂಮಿಯಲ್ಲಿ ಬದುಕುಳಿಯಬೇಕಾದರೆ ನಿಸರ್ಗದೊಡನೆ ನಿರಂತರ ಸಂವಾದದಲ್ಲಿ ತೊಡಗಬೇಕಾಗಿದೆ. ಮಾನವನು ಪ್ರಕೃತಿಯ ಅವಿಭಾಜ್ಯ ಅಭೇದ್ಯ ಅಂಗವಾಗಿರುವುದರಿಂದ ಆತನ ಭೌತಿಕ ಮತ್ತು ಮಾನಸಿಕ ಅಸ್ತಿತ್ವವು ಪ್ರಕೃತಿಯನ್ನು ಅವಲಂಬಿಸಿರು ತ್ತದೆ."

ಈ ನಿಟ್ಟಿನಲ್ಲಿ ಪ್ರತಿಯೊಂದು ರಾಷ್ಟ್ರವೂ ತಮ್ಮ ತಮ್ಮ ದೇಶದ ಕಲ್ಯಾಣಕ್ಕೆ ಪೂರಕವಾದ ಸುಸ್ಥಿರ ಅಭಿವೃದ್ಧಿಯತ್ತ ಒಲವು ತೋರಿಸಬೇಕಾಗಿದೆ. ಆಚರಣೆಗಳನ್ನು ಕೇವಲ ಆಚರಣೆ ಗಳಾಗಿಯೇ ಮಾಡಿಕೊಂಡಿರುವ ನಾವು, ಅವುಗಳ ಮಹತ್ವ ವೇನೆಂಬುದನ್ನು ಇದುವರೆಗೂ ಅರ್ಥ ಮಾಡಿಕೊಂಡಿಲ್ಲ. ಅವುಗಳ ನಿಜಾರ್ಥವನ್ನು ನಾವಿಂದು ತಿಳಿಯಬೇಕಾಗಿದೆ.

ಪ್ರತಿ ವರ್ಷ ಜೂನ್ ೫ ರಂದು ವಿಶ್ವ ಪರಿಸರ ದಿನಾಚರಣೆ ಯನ್ನು ಆಚರಿಸುತ್ತೇವೆ. ಕೇವಲ ಪರಿಸರ ದಿನಾಚರಣೆಯಂದು ಮಾತ್ರ ಪರಿಸರಪ್ರೇಮವನ್ನು ತೋರಿಸುವ ನಮ್ಮ ಮಂಕುಬುದ್ಧಿ ಯನ್ನು ನಾವೀಗ ಬಿಡಬೇಕು, ಬಿಟ್ಟು ಬದಲಾಗಬೇಕು. ಪ್ರತಿ ದಿನವೂ ಪರಿಸರ ದಿನವಾಗಬೇಕು. ನಾವು ಬದಲಾಗುವವರೆಗೂ ನಮ್ಮ ವ್ಯವಸ್ಥೆ ಬದಲಾಗದು.



# ಶ್ರೀಮಧ್ವಾಚಾರ್ಯರ ಜೀವಿತ ಚರಿತೆ

ಎಚ್.ವಿ. ಸರೋಜ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

**ದೇಶ ಸಂಚಾರ:** ನಾರಾಯಣ ಪಂಡಿತರು ತಮ್ಮ ಸುಮಧ್ವವಿಜಯದಲ್ಲಿ ಮಧ್ವಾಚಾರ್ಯರ ವ್ಯಕ್ತಿತ್ವವನ್ನು ಚೆನ್ನಾಗಿ ವರ್ಣಿಸಿದ್ದಾರೆ. ಅವರದು ಎತ್ತರವಾದ ಸುಂದರ ಕಾಯ; ಬೃಹಸ್ಪತಿಯಂತಹ ಬುದ್ಧಿಶಕ್ತಿ, ಜ್ಞಾಪಕಶಕ್ತಿ; ಯಾರಿಗೂ ಮಣಿಯದಂತಹ ಜ್ಞಾನಾರ್ಜನೆ. ಅಷ್ಟೇ ಚೆನ್ನಾಗಿ, ವಾದವಿವಾದ ಪ್ರವಚನಗಳಲ್ಲಿ ಅವರು ಪ್ರವೀಣರು; ಅವರ ಧ್ವನಿಯಂತೂ ಗಂಭೀರವಾಗಿದ್ದು, ವೇದಮಂತ್ರಗಳ ಉಚ್ಚಾರಣೆಗೆ ಹೇಳಿಮಾಡಿಸಿದಂತಿತ್ತು.

ಇಂತಹ ವ್ಯಕ್ತಿತ್ವವನ್ನು ಹೊಂದಿದ್ದ ಮಧ್ವಾಚಾರ್ಯರು ಶಿಷ್ಯ ಗಣದೊಂದಿಗೆ ಧರ್ಮಜಾಗೃತಿಗಾಗಿ ದೇಶಸಂಚಾರ ಹೊರಟರು. ಹಾಗೆಯೇ ಪಾಠಪ್ರವಚನಗಳಿಂದ ಶಿಷ್ಯರನ್ನು ತರಬೇತು ಗೊಳಿಸಿದರು.

ಸಂನ್ಯಾಸಿಯಾದ ತರುಣದಲ್ಲೇ, ಕನ್ಯಾಕುಮಾರಿ, ರಾಮೇಶ್ವರ, ಅನಂತಶಯನ, ಶ್ರೀರಂಗ – ಈ ಎಲ್ಲಾ ದಕ್ಷಿಣದ ಕ್ಷೇತ್ರಗಳನ್ನೂ ಸಂದರ್ಶಿಸಿದರು. ಮೂರು ಬಾರಿ ಹಿಮಾಲಯದ ತುತ್ತತುದಿಯಾದ ಬದರೀಧಾಮದ ತನಕ ಸಂಚರಿಸಿ ಬಂದರು. ತಮ್ಮ ಪ್ರಥಮ ಕೃತಿಯಾದ ಭಗವದ್ಗೀತಾಭಾಷ್ಯವನ್ನು ಅಲ್ಲಿ ಗುರು ವೇದವ್ಯಾಸರಿಗೆ ಅರ್ಪಿಸಿದರು. ಅಲ್ಲೇ ಇದ್ದುಕೊಂಡು, ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದರು.

ಹೋದೆಡೆಯಲ್ಲೆಲ್ಲಾ ಆಚಾರ್ಯರ ಅದ್ಭುತ ಪ್ರವಚನ ಗಳನ್ನು ಕೇಳಿ ಜನ ಮೈಮರೆತರು; ಹಾಗೆಯೇ ಅವರ ವ್ಯಕ್ತಿತ್ವವನ್ನು ಕಂಡು ತಲೆದೂಗಿದರು. ಹಲವಾರು ಕಡೆಗಳಲ್ಲಿ ಆಚಾರ್ಯರು ಅನೇಕ ಶಿಷ್ಯರನ್ನು ಸಂಪಾದಿಸಿದರು.

ಉಡುಪಿಗೆ ಮಧ್ವರು ಮರಳಿ ಬಂದಾಗ, ಅವರ ಗುರು ಗಳಾಗಿದ್ದ ಅಚ್ಯುತಪ್ರೇಕ್ಷರು ಆಚಾರ್ಯರೊಡನೆ ಚರ್ಚೆ ನಡೆಸಿ ತಮ್ಮ ಸಂಶಯಗಳನ್ನು ಪರಿಹರಿಸಿಕೊಂಡರು; ತಾವೂ ಮಧ್ವರ ಸಿದ್ಧಾಂತದ ಅನುಯಾಯಿಗಳಾದರು. ಗುರುವಿಗೇ ಉಪದೇಶ ಕೊಟ್ಟ ಈ ಶಿಷ್ಯ, ಜನತೆಯ ಹೃದಯದಲ್ಲಿಯೂ ಸ್ಥಿರವಾದ ಸ್ಥಾನವನ್ನು ಪಡೆದರು.

ಪದ್ಮನಾಭತೀರ್ಥರೆಂಬುವವರು ಶ್ರೀಮಧ್ವರ ಒಬ್ಬ ಪ್ರಮುಖ ಶಿಷ್ಯರು. ಅಲ್ಲದೆ ಅವರಿಗೆ ಇನ್ನೂ ಎಂಟು ಮಂದಿ ಅಂತರಂಗ ಶಿಷ್ಯರಿದ್ದರು. ಹೃಷೀಕೇಶತೀರ್ಥ, ನೃಸಿಂಹತೀರ್ಥ, ಜನಾರ್ದನ ತೀರ್ಥ, ಉಪೇಂದ್ರತೀರ್ಥ, ವಾಮನತೀರ್ಥ, ವಿಷ್ಣುತೀರ್ಥ, ರಾಮತೀರ್ಥ ಮತ್ತು ಅಧೋಕ್ಷಜ ತೀರ್ಥ. ಈ ಎಂಟು ಮಂದಿ ಯತಿಗಳು ಮುಂದೆ ಶ್ರೀಕೃಷ್ಣ ದೇವರ ಪೂಜೆಯ ಹೊಣೆ ಹೊತ್ತು ಉಡುಪಿಯ ಅಷ್ಟಮಠಗಳ ಮೂಲ ಪುರುಷರಾದರು.

ಒಮ್ಮೆ ಉತ್ತರಭಾರತ ಪ್ರವಾಸ ಮಾಡುತ್ತಿದ್ದಾಗ, ಹೀಗಾಯಿತು: ಗಂಗೆಯ ತೀರದ ಆಚೆಯ ದಡದಲ್ಲಿ ಮುಸ್ಲಿಂ ದೊರೆಯೊಬ್ಬನ ರಾಜ್ಯ. ನದಿಯ ಗುಂಟ ಸೈನಿಕರ ಭದ್ರ ಕಾವಲು. ದಾಟಲು ದೋಣಿಯ ವ್ಯವಸ್ಥೆಯೂ ಇಲ್ಲ. ಅಲ್ಲಿಗೆ ಬಂದು ನಿಂತಿದ್ದಾರೆ, ಮಧ್ವಾಚಾರ್ಯರು ಮತ್ತು ಅವರ ಶಿಷ್ಯರು. ಶಿಷ್ಯರಿಗೆಲ್ಲಾ ಒಂದೇ ಚಿಂತೆ. ಮುಂದೆ ಸಾಗುವ ಬಗೆ ಹೇಗೆ? ಶಿಷ್ಯರ ಯೋಚನೆ ಗುರುಗಳಿಗೆ ಅರಿವಾಯಿತು. ಅವರು ತಮ್ಮ ಗಂಭೀರ ಧ್ವನಿಯಲ್ಲಿ ಹೀಗೆ ನುಡಿದರು: "ಹೆದರಬೇಡಿ, ನಾವು ಸಂಸಾರದ ನದಿಯನ್ನೇ ದಾಟಿಸಬಂದವರು. ಗಂಗೆಯನ್ನು ದಾಟಿಸಲಾರೆವೆಂದು ತಿಳಿದಿರಾ? ನನ್ನ ಹಿಂದೆಯೇ ನೀರಿಗಿಳಿದು ಧೈರ್ಯವಾಗಿ ನಡೆದುಬನ್ನಿ."

ಆ ಕಡೆ ಶತ್ರು ಸೈನ್ಯದವರು, "ಇವರು ಶತ್ರುರಾಜ್ಯದ ಗೂಢಚಾರರಿರಬೇಕು; ಅದಕ್ಕೆಂದೇ ಬೈರಾಗಿಗಳ ಮೋಸದ ವೇಷ ಧರಿಸಿ ಬಂದಿದ್ದಾರೆ" ಎಂದು ಯೋಚಿಸಿದರು. ಶತ್ರು ಸೈನಿಕರ ಮುಖಂಡ ಆಜ್ಞಾಪಿಸಿದ, "ಇವರನ್ನು ಬರಗೊಡಬೇಡಿ. ದಡ ಸೇರುವ ಮುನ್ನ ಇವರನ್ನು ಮುಗಿಸಿಬಿಡಿ." ಈಗ ಆಚಾರ್ಯರು ಹೇಳಿದರು, "ಸುಮ್ಮನೆ ದುಡುಕಿ ನೀರಿಗೆ ಬಿದ್ದು ಸಾಯಬೇಡಿ. ನಾವಿರುವುದು ಬೆರಳೆಣಿಸುವಷ್ಟು ಜನ. ನೀವು ನಮಗೇಕೆ ಭಯಪಡಬೇಕು? ನಾವು ನಿಮ್ಮ ದೊರೆಯನ್ನು ನೋಡಬೇಕೆಂದು ಬಂದವರು, ಜಗಳಾಡಲು ಬಂದವರಲ್ಲ. "

ಈ ಧೀರವಾಣಿಯನ್ನು ಕೇಳಿ ಸೈನಿಕರು ಬೆರಗಾದರು. ಗುರುಶಿಷ್ಯರು ಗಂಗೆಯ ಪ್ರವಾಹದಲ್ಲೇ ನಡೆದು ಬಂದರು. ನೂರಾರು ಸೈನಿಕರು ಇವರ ಸುತ್ತ ಕತ್ತಿ ಹಿಡಿದು ನಿಂತರು. ತನ್ನ ಅರಮನೆಯ ಮಹಡಿಯ ಮೇಲೆ ನಿಂತು ನೋಡುತ್ತಿದ್ದ ಸುಲ್ತಾನ ಇದನ್ನು ಕಂಡು ಅಚ್ಚರಿಗೊಂಡ. ಸೈನಿಕರ ಕಾವಲನ್ನು ಮೀರಿ ತನ್ನ ರಾಜ್ಯದ ಗಡಿಯೊಳಗೆ ಪ್ರವೇಶಿಸುವುದು ಈ ಹಿಂದೂ ಬೈರಾಗಿಗೆ ಹೇಗೆ ಸಾಧ್ಯವಾಯಿತು? ಅಲ್ಲಿಂದಲೇ ನುಡಿದ,

"ನೆರೆಯ ಶತ್ರುರಾಜನ ಗೂಢಚಾರರು ಇತ್ತ ಸುಳಿಯದಂತೆ ನಾನು ನದಿಯ ಸುತ್ತ ಸೈನಿಕರನ್ನಿಟ್ಟಿದ್ದೇನೆ. ಅವರ ಕೈಯಿಂದ ತಪ್ಪಿಸಿಕೊಂಡು, ಜೀವವುಳಿಸಿಕೊಂಡು ಯಾವೊಬ್ಬನೂ ಈ ತನಕ ಇತ್ತ ಬಂದಿಲ್ಲ. ಆದರೆ ಎಲ್ಲೈ ಬೈರಾಗಿ, ನೀವು ಹೇಗೆ ಅವರಿಂದ ಪಾರಾಗಿ ಬಂದಿರಿ ? ದೋಣಿ ಇಲ್ಲದೆ ನದಿಯನ್ನು ದಾಟುವುದು ನಿಮಗೆ ಹೇಗೆ ಸಾಧ್ಯವಾಯಿತು? ನೀವು ಇತ್ತ ಬಂದ ಉದ್ದೇಶವಾದರೂ ಏನು ?" ಸಂನ್ಯಾಸಿವರೇಣ್ಯರಾದ ಆಚಾರ್ಯರು ನಗುತ್ತ, ಸೂರ್ಯನತ್ತ ಬೆರಳು ತೋರಿಸಿ, ದೊರೆಯ ಭಾಷೆಯಲ್ಲೇ (ಪರ್ಷಿಯನ್) ಹೀಗೆ ಉತ್ತರಿಸಿದರು: "ನಮ್ಮೆಲ್ಲರ ದೇವರು ಜಗತ್ತನ್ನೇ ಬೆಳಗುವ ಭಗವಂತ ಅಲ್ಲಿದ್ದಾನೆ, ನೋಡು. ನಿನಗೆ ಅವನು 'ಅಲ್ಲಾ', ನನಗಾದರೋ 'ನಾರಾಯಣ.' ಯಾವ ಹೆಸರಿನಿಂದ ಕರೆದರೂ ಓಗೊಡುವ ದೇವರು ಒಬ್ಬನೇ. ನಾನು, ನೀನು, ಎಲ್ಲರೂ ಅವನ ರಾಜ್ಯದ ಪ್ರಜೆಗಳು. ಅವನ ಅನುಗ್ರಹದಿಂದಲೇ, ನಾವೆಲ್ಲರೂ ದೋಣಿಯಿಲ್ಲದೆ ನದಿಯನ್ನು ದಾಟಿದೆವು, ಕೊಲ್ಲಬಂದ ಸೈನಿಕರ ಮನವೊಲಿಸಿ ಇತ್ತ ಬಂದೆವು. ಅದೆಲ್ಲಾ ಅವನ ಕರುಣೆ. ನಾವು ನಿನ್ನ ರಾಜ್ಯದ ಮಾರ್ಗವಾಗಿ ಉತ್ತರಕ್ಕೆ ಹೊರಟವರು."

ಸಂನ್ಯಾಸಿಯ ಆ ಗಂಭೀರ ವರ್ತನೆ, ಎದೆಗಾರಿಕೆ, ಆತ್ಮಶಕ್ತಿ, ದಿವ್ಯತೇಜಸ್ಸು – ಇವನ್ನು ಕಂಡು, ಅವರ ಧೀರ ಮಾತುಗಳನ್ನು ಕೇಳಿ ಮುಸ್ಲಿಂ ದೊರೆ ಬೆರಗಾದ. ಅಟ್ಟದಿಂದ ಇಳಿದು ಬಂದು ಸಂನ್ಯಾಸಿಯನ್ನು ರಾಜಸಭೆಗೆ ಆಹ್ವಾನಿಸಿದ, ಸತ್ಕರಿಸಿದ. ತನ್ನ ರಾಜ್ಯದಲ್ಲೇ ಬಹು ದೊಡ್ಡ ಜಹಗೀರನ್ನು ಬಿಟ್ಟುಕೊಟ್ಟು, ಅಲ್ಲೇ ಆಶ್ರಮ ಕಟ್ಟಿಕೊಂಡಿರುವಂತೆ ಬಿನ್ನವಿಸಿಕೊಂಡ. ಆದರೆ ಶ್ರೀಮಧ್ವಾಚಾರ್ಯರು ಸೌಜನ್ಯದಿಂದಲೇ ಆ ಕೊಡುಗೆಯನ್ನು ಬೇಡವೆಂದರು; ಅಲ್ಲಿಂದ ಉತ್ತರಕ್ಕೆ ನಡೆದೇಬಿಟ್ಟರು.

**ಉಡುಪಿಯಲ್ಲಿ ಶ್ರೀಕೃಷ್ಣನ ಪ್ರತಿಷ್ಠಾಪನೆ:** ಸರಕನ್ನು ಹೇರಿಕೊಂಡು ದ್ವಾರಕೆಯಿಂದ ಹೊರಟ ಹಾಯಿಹಡಗೊಂದು ಉಡುಪಿಯ ಸಮೀಪ, ಪಶ್ಚಿಮ ಸಮುದ್ರದಲ್ಲಿ ಮಲ್ಪೆಯ ಬಳಿ ದಕ್ಷಿಣದತ್ತ ಸಾಗುತ್ತಿದ್ದಾಗ, ಬಿರುಗಾಳಿಗೆ ಸಿಕ್ಕಿ ತತ್ತರಿಸಿತು. ಆಗ ಅದರ ನಾವಿಕರು ಆತ್ಮರಕ್ಷಣೆಗಾಗಿ ಕೂಗಿಕೊಂಡರು. ಕಡಲತೀರದಲ್ಲಿ ಧ್ಯಾನಸ್ಥರಾಗಿದ್ದ ಆಚಾರ್ಯರಿಗೆ ಇದು ತಿಳಿಯಿತು. ಅವರು ತಮ್ಮ ಬಟ್ಟೆಯ ತುದಿಯನ್ನು ಎತ್ತಿ ಬೀಸಿದರು. ಬಿರುಗಾಳಿ ಶಾಂತವಾಯಿತು. ಹಡಗನ್ನು ರಕ್ಷಿಸಿ, ಪ್ರಾಣಾಪಾಯದಿಂದ ಪಾರು ಮಾಡಿದ ಆಚಾರ್ಯರಿಗೆ ಏನಾದರೂ ಕಾಣಿಕೆಯನ್ನು ನೀಡಿ ಕೃತಜ್ಞತೆಯನ್ನು ಸಲ್ಲಿಸಬೇಕು ಎಂದು ನಾವಿಕರು ಆಶಿಸಿದರು. ಆಚಾರ್ಯರು ಹಡಗಿನಲ್ಲಿದ್ದ ಗೋಪಿಚಂದನದ ಹೆಂಟೆಯೊಂದನ್ನು ಮಾತ್ರವೇ ಕಾಣಿಕೆಯಾಗಿ ಪಡೆದರು. ಆ ಹೆಂಟೆಯೊಳಗಿದ್ದ ಮುದ್ದಾದ ಶ್ರೀಕೃಷ್ಣವಿಗ್ರಹವನ್ನು ಸಮೀಪದ ಕೊಳದಲ್ಲಿ ತೊಳೆದು ತಾವೇ ಅದನ್ನು ಉಡುಪಿಯ ಮಠಕ್ಕೆ ಮೆರವಣಿಗೆಯಲ್ಲಿ ತಂದರು. ಹಾಗೆ ವಿಗ್ರಹವನ್ನು ತರುವಾಗ, ದೇವರ ಮೇಲಿನ ಭಕ್ತಿಯಿಂದ ಹೊರಹೊಮ್ಮಿದ ಸ್ತೋತ್ರಗಳೇ ಪ್ರಸಿದ್ಧವಾದ 'ದ್ವಾದಶ ಸ್ತೋತ್ರಗಳು.' ಈ ಹನ್ನೆರಡು ಶ್ಲೋಕಗಳು





ಶ್ರೀಕೃಷ್ಣನ ಮೇಲಿನ ಭಕ್ತಿಸ್ತೋತ್ರಗಳು. ಒಂದು ನಂಬಿಕೆಯ ಪ್ರಕಾರ, ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನೇ ಈ ವಿಗ್ರಹವನ್ನು ಕೆತ್ತಿದನು. ಇದನ್ನು ಬೃಂದಾವನದ ಗೋಪಿಯರು ಮತ್ತು ಶ್ರೀಕೃಷ್ಣನ ಮಡದಿ ರುಕ್ಮಿಣಿ ಪೂಜಿಸುತ್ತಿದ್ದರು. ಶ್ರೀಮಧ್ವಾಚಾರ್ಯರು ಶ್ರೀಕೃಷ್ಣನ ವಿಗ್ರಹಕ್ಕೆ ಒಂದು ದೇವಸ್ಥಾನವನ್ನು ಕಟ್ಟಿಸಿ, ಈ ಮೂರ್ತಿಯನ್ನು ಅಲ್ಲಿ ಸ್ಥಾಪಿಸಿದರು. ಈ ಮೂರ್ತಿಯನ್ನು ಹಲವು ವರ್ಷಗಳ ಕಾಲ ತಾವೇ ಸ್ವತಃ ಪೂಜಿಸಿದರು.

ಉಡುಪಿಯಲ್ಲಿದ್ದಾಗ ಆಚಾರ್ಯರು ಪೂಜಾವಿಧಾನಗಳಲ್ಲಿ ಮತ್ತು ಹೋಮವನ್ನು ಆಚರಿಸುವುದರಲ್ಲಿ ಅನೇಕ ಸುಧಾರಣೆಗಳನ್ನು ತಂದರು. ಪ್ರಾಣಿಬಲಿಗೆ ಬದಲಾಗಿ ಹಿಟ್ಟು ಮತ್ತು ತುಪ್ಪ ಸೇರಿಸಿ ಮಾಡಿದ ಪ್ರಾಣಿಯ ಆಕೃತಿಯನ್ನು ಬಲಿ ಕೊಡುವ ಪದ್ಧತಿಯನ್ನು ಆಚರಣೆಗೆ ತಂದರು. ಆ ಕಾಲಕ್ಕೆ ಇದು ಸಮಾಜ ಸುಧಾರಣೆಯ ಒಂದು ದೊಡ್ಡ ಕ್ರಾಂತಿಯೇ ಸರಿ.

ಒಂದು ಸಲ ಪ್ರಯಾಣ ಮಾಡುತ್ತಿದ್ದಾಗ ಆಚಾರ್ಯರ ಮತ್ತು ಅವರ ಶಿಷ್ಯರ ಮೇಲೆರಗಲು ಬಂದ ಹುಲಿಯನ್ನು ತಮ್ಮ ಭೀಮಬಲದಿಂದ ಹೊಡೆದು ಓಡಿಸಿದರು. ಇನ್ನೊಂದು ಸಲ ತಾವು ಭೀಮಾವತಾರದಲ್ಲಿ ಉಪಯೋಗಿಸಿದ ಗದೆಯನ್ನು ತಮ್ಮ ಶಿಷ್ಯರಿಗೆ ತೋರಿಸಿದರಂತೆ. ಇದೆಲ್ಲ ಶ್ರೀಮಧ್ವರು ದೈಹಿಕವಾಗಿ, ಬೌದ್ಧಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಎಷ್ಟು ದೃಢರಾಗಿದ್ದರು ಎಂಬುದನ್ನು ತೋರಿಸುತ್ತದೆ.

ಹಿಮಾಲಯದ ದುರ್ಗಮ ದಾರಿಯಲ್ಲಿ ಕಳ್ಳರ ಪಡೆಯೊಂದು ಅಡ್ಡಗಟ್ಟಿದಾಗ ಆಚಾರ್ಯರ ಶಿಷ್ಯರು ಗಾಬರಿಯಾದರು. ಆಚಾರ್ಯರ ಮುಖದಲ್ಲಿದ್ದ ಮಂದಹಾಸ ಮಾತ್ರ ಮಾಸಲಿಲ್ಲ. ಅವರು ತಮ್ಮ ಶಿಷ್ಯರಲ್ಲಿ ಒಬ್ಬನಾದ ಉಪೇಂದ್ರತೀರ್ಥರನ್ನು ಕರೆದು ಹೇಳಿದರು, "ಉಪೇಂದ್ರ, ನಿನ್ನ ಸಹಯಾತ್ರಿಗಳಿಗೆ ಆಪತ್ತು ಬಂದಿರುವಾಗ ಏಕೆ ನೋಡುತ್ತಾ ನಿಂತಿರುವೆ? ದಂಡ ಹಿಡಿದ



ಕೈಗೆ ಕೊಡಲಿ ಹಿಡಿಯುವುದು ತಿಳಿದಿರಬೇಕು, ನಡೆ ಮುಂದೆ." ಗುರುವಿನ ಆದೇಶದಿಂದ ಉಪೇಂದ್ರತೀರ್ಥರಿಗೆ ವೀರಾವೇಶ ಬಂದಂತಾಯಿತು. ಅವರು ಗಾಳಿಯಂತೆ ರೊಯ್ಯನೆ ಮುಂದೆ ನುಗ್ಗಿ, ಒಬ್ಬ ದರೋಡೆಕೋರನ ಕೈಯಲ್ಲಿದ್ದ ಕೊಡಲಿಯನ್ನೇ ಕಿತ್ತುಕೊಂಡು ಬೀಸತೊಡಗಿದರು. ಆ ಸಂನ್ಯಾಸಿಯ ಶೌರ್ಯವನ್ನು ಕಂಡು ಕಂಗಾಲಾದ ದರೋಡೆಕೋರರು ಓಡಿಹೋದರು.

ಮಲೆನಾಡಿನ ಕಳಸದ ಸಮೀಪ, ಭದ್ರಾನದಿಯಲ್ಲಿ ಆಚಾರ್ಯರು ಎತ್ತಿಟ್ಟ ಹೆಬ್ಬಂಡೆಗಲ್ಲು ಅವರ ಭೀಮಬಲಕ್ಕೆ ಶಿಲಾಸಾಕ್ಷಿಯಾಗಿ ಈಗಲೂ ಉಳಿದಿದೆ. ಆ ಬಂಡೆಯ ಮೇಲಿನ ಶಿಲಾಶಾಸನ ವಾಕ್ಯ ಈ ಮಾತನ್ನು ದೃಢಪಡಿಸುತ್ತದೆ. ಬಂಡೆಯ ಮೇಲುಗಡೆ ದಂಡಪಾಣಿಯಾದ ಆಚಾರ್ಯರ ಸುಂದರ ಮೂರ್ತಿಯನ್ನು ಕೆತ್ತಿ ಅದರ ಕೆಳಗೆ ಹೀಗೆ ಬರೆಯಲಾಗಿದೆ: **"ಶ್ರೀ ಮಧ್ವಾಚಾರ್ಯೈಃ ಏಕಹಸ್ತೇನ ಆನೀಯ ಸ್ಥಾಪಿತಾ ಶಿಲಾ"** – 'ಶ್ರೀಮಧ್ವಾಚಾರ್ಯರು ಒಂದೇ ಕೈಯಲ್ಲಿ ತಂದಿಟ್ಟ ಶಿಲೆ.'

ಕಾಶಿಯಲ್ಲಿ ಪ್ರಸಿದ್ಧ ಹಿರಿಯ ಅದ್ವೈತಿಯೊಬ್ಬರನ್ನು ಆಚಾರ್ಯರು ಶಾಸ್ತ್ರಚರ್ಚೆಯಲ್ಲಿ ಪರಾಭವಗೊಳಿಸಿದರು. ಕುರುಕ್ಷೇತ್ರದಲ್ಲಿ ಒಂದೆಡೆ ಮಣ್ಣು ಅಗೆಯಿಸಿ ಹೂತುಹೋಗಿದ್ದ ಮಹಾಭಾರತ ಯುದ್ಧದ ಕಾಲದ ಆಯುಧಗಳನ್ನು ತಮ್ಮ ಶಿಷ್ಯರಿಗೆಲ್ಲಾ ತೆಗೆದು ತೋರಿಸಿ, ಹಾಗೆಯೇ ಅವುಗಳನ್ನು ಭೂಗತ ಮಾಡಿದರು.

ಉಡುಪಿಗೆ ಬರುವ ಮಾರ್ಗದಲ್ಲಿ ಗೋವೆಗೆ ಬಂದರು. ಪಶುಪೆಯಲ್ಲಿ ಸಂಗೀತ ಹಾಡಿ ಸಭಿಕರೆಲ್ಲರ ಮೈಮರೆಸಿದರು. ಆಚಾರ್ಯರ ಕಂಠಶ್ರೀಯೂ ಅಪೂರ್ವವಾಗಿತ್ತು. ಆಚಾರ್ಯರು ತತ್ತ್ವಶಾಸ್ತ್ರದಲ್ಲಿ ಕೂಡ ಅದ್ವಿತೀಯ ಪಂಡಿತರಾಗಿದ್ದರು. ಶಿಲ್ಪಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ವೇದಾಂಗಗಳಲ್ಲಿ ಪ್ರಗಲ್ಭ ಪಂಡಿತರಾಗಿದ್ದರು. ಆದರೆ, ಇದಾವುದನ್ನು ಅಂಟಿಸಿಕೊಳ್ಳದ ನಿರ್ಲಿಪ್ತ ಧೀರ ಸಂನ್ಯಾಸಿಗಳಾಗಿದ್ದರು.

ಆಚಾರ್ಯರು ಕಾಸರಗೋಡಿಗೆ ಹೋದರು. ಯಾರೋ ಕಿಡಿಗೇಡಿಗಳು ಕಳವು ಮಾಡಿದ್ದ ಅವರ ಗ್ರಂಥಗಳನ್ನು ಅಲ್ಲಿಯ ರಾಜ ದೊರಕಿಸಿಕೊಟ್ಟ. ಅನಂತರ ಅಲ್ಲಿನ ಪ್ರಖ್ಯಾತ ಪಂಡಿತರಾಗಿದ್ದ ತ್ರಿವಿಕ್ರಮ ಪಂಡಿತ ಎಂಬುವವರು ಆಚಾರ್ಯರ ಜೊತೆ ವಾದಮಾಡಿದರು. ಆಚಾರ್ಯರ ಮೇಲೆ ಪ್ರಶ್ನೆಗಳ ಸುರಿಮಳೆಯನ್ನೇ ಸುರಿಸಿದರು. ಆಚಾರ್ಯರು ಶಾಂತವಾಗಿ ಮುಗುಳುನಗೆ ನಗುತ್ತಲೇ ಒಂದೊಂದು ಪ್ರಶ್ನೆಗೂ ಉತ್ತರಿಸಿದರು. ಹದಿನೈದು ದಿನಗಳ ಕಾಲ ವಾದ ನಡೆಯಿತು. ಕೊನೆಗೆ ತ್ರಿವಿಕ್ರಮ ಪಂಡಿತರು ತಮ್ಮ ಸಂಶಯಗಳನ್ನೆಲ್ಲಾ ಪರಿಹರಿಸಿಕೊಂಡು ಆಚಾರ್ಯರ ಶಿಷ್ಯರಾದರು.

ಆ ಸಮಯದಲ್ಲಿ ಆಚಾರ್ಯರು ಮಾಡಿದ ವಾದದ ಸಾರಾಂಶ ಹೀಗಿತ್ತು:

"ಗುಣಪೂರ್ಣನಾದ ಭಗವಂತನೊಬ್ಬ ಇದ್ದಾನೆ. ಅವನನ್ನು ನಾರಾಯಣ ಎನ್ನುತ್ತಾರೆ. ಈಶ್ವರ, ಬ್ರಹ್ಮ, ವಿಷ್ಣು ಇವೆಲ್ಲವೂ ಅವನದೇ ಹೆಸರು. ದೇವರನ್ನು ಯಾವ ಹೆಸರಿನಿಂದ ಕರೆದರೂ ಒಂದೇ.

"ಈ ಜೀವ ಪ್ರತಿಬಿಂಬ, ಭಗವಂತ ಅದರ ಬಿಂಬ. ಪ್ರತಿಬಿಂಬದ ಮೂಲಕವೇ ಬಿಂಬದ ಅರಿವು. ಜೀವದ ಅರಿವಿಲ್ಲದೆ ದೇವನ ಅರಿವು ಸಾಧ್ಯವಿಲ್ಲ. ಮೊದಲು 'ನಾನು' ಎಂದರೆ ಏನು ಎನ್ನುವುದನ್ನು ತಿಳಿಯಬೇಕು ಆಗ ಭಗವಂತನ ಅರಿವೂ ಬರುತ್ತದೆ. ವೇದಗಳು ಮೂಲಪ್ರಮಾಣಗಳು. ತತ್ತ್ವವನ್ನು ತಿಳಿಯುವ ಸಲುವಾಗಿ ಕೇವಲ ತರ್ಕಕ್ಕೆ ಶರಣಾಗಬೇಡಿ. ತರ್ಕದಾರಿ ತಪ್ಪಿಸುವ ಭಯವುಂಟು. ಸತ್ಯದ ಅರಿವಿಗಾಗಿ ವೇದಗಳಿಗೆ ಶರಣಾಗಬೇಕು.

"ಕರ್ತವ್ಯಕರ್ಮವನ್ನು ಎಂದೂ ಮರೆಯಬೇಡಿ. ನಿಮಗಿಂತ ಹೆಚ್ಚು ಕಷ್ಟದಲ್ಲಿರುವವರ ಸೇವೆಯೇ ನಿಜವಾದ ಕರ್ತವ್ಯಕರ್ಮ. ಈ ಲೋಕಸೇವೆಯೆಂಬುದು ನೀವು ಭಗವಂತನ ರಾಜ್ಯದ ಪ್ರಜೆಯಾದುದಕ್ಕಾಗಿ ಅವನಿಗೆ ಸಲ್ಲಿಸಬೇಕಾದ ಕಂದಾಯ.

"ಜಗತ್ತು ಭಗವಂತನ ಅದ್ಭುತ ಸೃಷ್ಟಿ. ಭಗವಂತನ ಹಿರಿಮೆಯನ್ನು ಅರಿತುಕೊಳ್ಳಿ, ನಿಮ್ಮ ಸೀಮೆಯನ್ನು ಅರಿತು ಆ ಮಹಾಶಕ್ತಿಗೆ ಶರಣಾಗಿರಿ. ಬಾಳಿನ ಬಂಧನವನ್ನು ದಾಟಲು ಇದೊಂದೇ ದಾರಿ."

ಆಚಾರ್ಯರಿಗೆ ತ್ರಿವಿಕ್ರಮ ಪಂಡಿತರೆಂದರೆ ಅಪಾರ ಪ್ರೀತಿ. ತಮ್ಮ ಶಿಷ್ಯನ ಪ್ರಾರ್ಥನೆಯ ಫಲವಾಗಿ ಆಚಾರ್ಯರು ಬ್ರಹ್ಮಸೂತ್ರಗಳ ಮೇಲೆ 'ಅನುವ್ಯಾಖ್ಯಾನ' ಎಂಬ ಶ್ಲೋಕಬದ್ಧವಾದ ಬೃಹತ್‌ಗ್ರಂಥವನ್ನು ರಚಿಸಿದರು. ಒಬ್ಬೊಬ್ಬ ಶಿಷ್ಯರಿಂದ ಒಂದೊಂದು ಭಾಗವನ್ನು ಏಕಕಾಲದಲ್ಲಿ ಬರೆಸಿದರು. ಅದೇ ರೀತಿ 'ನ್ಯಾಯವಿವರಣ' ಎಂಬ ಗ್ರಂಥದ ರಚನೆಯೂ ಆಯಿತು.

ಕಾಸರಗೋಡಿನಲ್ಲಿ ಚಾತುರ್ಮಾಸ್ಯವನ್ನು ಮುಗಿಸಿ ಮರಳಿದ ಆಚಾರ್ಯ ಮಧ್ವರು ತಮ್ಮ ಹುಟ್ಟೂರಾದ ಪಾಜಕಕ್ಕೆ ಬಂದರು. ವಿರಕ್ತಿಯಿಂದ ಸಂನ್ಯಾಸವನ್ನು ಬಯಸಿ ಕಾದುನಿಂತಿದ್ದ ತಮ್ಮ ಸಹೋದರನಿಗೆ ಸಂನ್ಯಾಸ ದೀಕ್ಷೆ ನೀಡಿದರು. ಇವರೇ ಸೋದೆ ಮಠದ ಮತ್ತು ಸುಬ್ರಹ್ಮಣ್ಯ ಮಠದ ಮೂಲಯತಿಗಳಾದ ಶ್ರೀವಿಷ್ಣುತೀರ್ಥರು. ಹಾಗೆಯೇ ಶೋಭನಭಟ್ಟರೆಂಬುವವರೂ ಆಚಾರ್ಯರಿಂದ ಸಂನ್ಯಾಸದೀಕ್ಷೆ ಪಡೆದರು. ಅವರು ಮುಂದೆ ಪದ್ಮನಾಭತೀರ್ಥ ಎಂದು ಪ್ರಸಿದ್ಧರಾಗಿ ದೇಶಸ್ಥ ಮಠಗಳ ಮೂಲಯತಿಗಳಾಗಿ ವಿಖ್ಯಾತರಾದರು.

ಶ್ರೀಮಧ್ವರು ಮಹಾಭಾರತದ ತಾತ್ತ್ವಿಕ ವಿಮರ್ಶೆ ಇರುವ 'ಮಹಾಭಾರತ ತಾತ್ಪರ್ಯ ನಿರ್ಣಯ' ಬರೆದರು. ಶ್ರೀಕೃಷ್ಣನ ಮಹಿಮೆಯನ್ನು ಸಾರುವ 'ಕೃಷ್ಣಾಮೃತ ಮಹಾರ್ಣವ' ಬರೆದರು. ವಾಸ್ತುಶಿಲ್ಪ ಹಾಗೂ ಪ್ರತಿಮಾಶಿಲ್ಪದ ಅಪೂರ್ವ ವಿವರಣೆಗಳನ್ನು ಒಳಗೊಂಡ "ತಂತ್ರಸಾರ ಸಂಗ್ರಹ" ಬರೆದರು. ಆಚಾರ್ಯರ ಆದೇಶದಂತೆ ತ್ರಿವಿಕ್ರಮ ಪಂಡಿತರು ಬ್ರಹ್ಮಸೂತ್ರ ಭಾಷ್ಯಕ್ಕೆ ವಿವರಣೆ ಬರೆದರು.

ತಾವು ಉಡುಪಿಯಲ್ಲಿ ಸ್ಥಾಪಿಸಿದ್ದ ಶ್ರೀಕೃಷ್ಣನ ಪೂಜೆ ತಪ್ಪದೆ ಕ್ರಮವಾಗಿ ನಡೆದುಕೊಂಡು ಹೋಗುವಂತೆ ಮಾಡಲು, ಶ್ರೀಮಧ್ವಾಚಾರ್ಯರು, ಪೂಜೆಯ ಜವಾಬ್ದಾರಿಯನ್ನು ತಮ್ಮ ಎಂಟು ಜನ ಸಂನ್ಯಾಸಿಶಿಷ್ಯರಿಗೆ ವಹಿಸಿದರು. ಅವರೆಲ್ಲ ಆ